# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ.749/ 2021

ಸಿಡಬ್ಲ್ಯೂ ಃ1
ಪಿಡಬ್ಲ್ಯೂ ಃ1

<u>ದಿನಾಂಕಃ **25-11-2023**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರು - ಲಲಿತಮ್ಮ

ತಂದೆಯ/ಗಂಡನ ಹೆಸರು - ಸಿದ್ರಾಮ ರೆಡ್ಡಿ

ವಯಸ್ಸು -?39 ವರ್ಷ

ಉದ್ಯೋಗ - ಮನೆ ಕೆಲಸ

ವಾಸಸ್ಥಳಃ - ಕಮದಾಳ

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಆರೋಪಿ ನನ್ನ ಗಂಡ. ಚಾಸಾಃ4 ಮತುತ 5 ರವರು ನನ್ನ ತಂದೆ ತಾಯಿಯರು. ಚಾಸಾಃ6 ರಿಂದ 8 ರವರ ಪರಿಚಯ ಇದೆ. ಸುಮಾರು 25 ವರ್ಷದ ಹಿಂದೆ ನಮ್ಮ ಮದುವೆಯು ಯಾದಗಿರಿಯ ವೀರಶೈವ ಕಲಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ಆರೋಪಿ ಮತ್ತು ಆತನ ತಂದೆ ತಾಯಿಯವರೊಂದಿಗೆ ಬೆನಕನಳ್ಳಿಯಲ್ಲಿ ವಾಸವಾಗಿದ್ದೆ. ಮದುವೆಯಾದ ನಂತರ ನನಗೆ ಇಬ್ಬರೂ ಹೆಣ್ಣು ಮಕ್ಕಳು ಆಗಿದ್ದಾರೆ. ನನ್ನ ಹೆರಿಗೆ ನನ್ನ ತವರು ಮನೆಯಲ್ಲಿ ಆಗಿರುತ್ತದೆ. ಮೊದಲನೆ ಮಗಳು ಮಧು , ಎಡರನೆ ಮಗಳು ಪ್ರಿಯಾಂಕ. ಮೊದಲನೆ ಮಗಳು ಹುಟ್ಟಿದ್ದ ನಂತರ 2 ವರ್ಷದ ನಂತರ 2 ನೇ ಮಗವಿಗೆ ಜನ್ಮವಾಗಿರುತ್ತದೆ. ನಾನು ಆ ಸಮಯದಲ್ಲಿ ನನ್ನ ತವರು ಮನೆಯ ಕಮದಾಳದಲ್ಲಿ ವಾಸವಾಗಿದ್ದೆ. ಆರೋಪಿಯು ನನ್ನ ತವರು ಮನೆಗೆ ಬಂದು 2 ನೇ ಮಗು ಹೆಣ್ಣು ಆಗಿದೆ ನನಗೆ ಗಂಡು ಮಗು ಬೇಕು ಆದ ಕಾರಣ ನಾನು 2 ನೇ ಮದುವೆ ಮಾಡಿಕೊಳ್ಳುತೇನೆ ಎಂದು ತಿಳಿಸಿದ. ನಂತರ ಆರೋಪಿಯು ನನಗೆ ಹೆಣ್ಣು ಮಗು ಹುಟ್ಟಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದನು. ಆರೋಪಿಯು ನನಗೆ ತಿಳಿಸಿದೆ ಬೂದಿನಾಳ ಊರಿನ ಶಿವಮ್ಮ ಅಲಿಯಾಸ ವೇದ ಎಂಬ ಹುಡಗಿಯ ಜೊತೆಗೆ ಮದುವೆ ಮಾಡಿಕೊಂಡನು. ವಿಷಯ ತಿಳಿದ ನಂತರ ನಾನು, ನನ್ನ ತಂದೆ ತಾಯಿ ಮತ್ತು ನಮ್ಮ ದೊಡ್ಡಪ್ಪರೊಂದಿಗೆ ಆರೋಪಿಗೆ ಮನೆಗೆ ಬೆನಕನಳ್ಳಿ ಊರಿಗೆ ಹೋದೆವು. ಆರೋಪಿಯು ಮನೆಗೆ ಕರೆದುಕೊಳ್ಳುವುದಿಲ್ಲ

ಎಂದು ಹೇಳಿದ. ಜಗಳ ಮಾಡಿದ ಆದಕಾರಣ ನಾನು ಊರಿನ ಜನರು ಮತ್ತು ಚಾಸಾಃ5 ಮತ್ತು 6 ರವರನ್ನು ಸೇರಿಸಿದೆ. ಪಂಚರು ನನ್ನ ಗಂಡನನ್ನು ಕರೆಸಿದರು. ಪಂಚಾಯತಿಯಲ್ಲಿ ಆರೋಪಿಗೆ ನನ್ನನ್ನು ನೋಡಿಕೊಳ್ಳಬೇಕು ಮತ್ತು 2 ನೇ ಹೆಂಡತಿಯನ್ನು ಸಹ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಆರೋಪಿಯು ಬೇರೆ ಮನೆ ಮಾಡುವುದಿಲ್ಲ ಎಂದು ಅವಾಚ್ಯ ಶಬ್ದದಿಂದ ಬೈದನು. ನಂತರ ನಾನು ನನ್ನ ತವರು ಮನೆಗೆ ಹೋದೆ. ನನ್ನ ಗಂಡನಿಗೆ ಬೆನಕನಳ್ಳಿ ಗ್ರಾಮದಲ್ಲಿ 64 ಎಕರೆ ಜಮಿನು ಇದೆ. ಅದರಲ್ಲಿ 24 ಎಕರೆ ನೀರಾವರಿ ಜಮೀನು ಇದೆ. ಅದರಲ್ಲಿ ಭತ್ತದ ಎರಡು ಬೆಳೆ ಬೆಳಯುತ್ತಾನೆ. ಆರೋಪಿಯು ನನಗೆ ಯಾವುದೇ ಜೀವನಾಂಶ ಕೊಟ್ಟಿರುವುದಿಲ್ಲ. ನನ್ನ ಮಕ್ಕಳು ಚಿಕ್ಕವರಾಗಿದ್ದರಿಂದ ಶಾಲೆಗೆ ಹಚ್ಚಿರುವುದಿಲ್ಲ. ನಂತರ ನಾನು 4 ತಿಂಗಳ ನಂತರ ರಾಯಚೂರ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದೆ. ನಾನು ನನ್ನ ಮಗಳು 21 ವಯಸ್ಸಿನವಳಾಗಿದ್ದಾಗ ಮತ್ತು 2 ನೇ ಮಗಳು 18 ವರ್ಷದಳವಾಗಿದ್ದಾಗ ನಾನು ಆರೋಪಿ ವಿರುದ್ಧ ದೂರು ಸಲಿಸಿರುತ್ತೇನೆ. ಆ ಸಮಯದಲ್ಲಿ ದೂಡ್ಡ ಮಗಳು ಬೆಂಗಳೂರಿನಲ್ಲಿ ಇಂಜನೀಯರಿಂಗ ಮತ್ತು 2 ನೇ ಮಗಳು ರಾಯಚೂರಿನಲ್ಲಿ ಪಿಯುಸಿ ಮಾಡುತ್ತಿದ್ದಳು. ಕೊರೋನಾ ಸಮಯದಲ್ಲಿ ಆರೋಪಿ ಯಾವುದೇ ಜೀವನಾಂಶ ಕೂಟ್ಟಿರುವುದಿಲ್ಲ. ನಾನು ಒಂದು ಪ್ರತ್ಯೇಕವಾದ ಬೆನಕನಳ್ಳಿಯಲ್ಲಿ ನಾನು ನನ್ನ ತಂದೆ ತಾಯಿಯರು ಜೊತೆ ವಾಸವಾಗಿದ್ದೆ. ದಿಃ09-06-2021 ರಲ್ಲಿ ಮಃ12-00 ಗಂಟೆಗೆ ನಾನು ಮತ್ತು ನನ್ನ ತಂದೆ ತಾಯಿ ಭತ್ತ ಹಾಕಿದಲ್ಲಿ ನಾವು ಹೋದಾಗ ಆರೂಪಿಯು ಲಾರಿ ನಂಬರ ಕೆಎ-28-7509 ನೇದ್ದರಲ್ಲಿ ಭತ್ತವನ್ನು ತುಂಬಿಸುತ್ತಿದ್ದ ಆ ಸಮಯದಲ್ಲಿ ನಾನು ಹೋರಿ ಈ ಸಲದ ಫಸಲನ್ನು ನನಗೆ ಬಿಟ್ಟುಕೊಡಿ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಬೇಕಾಗಿದೆ ಎಂದು ಆರೋಪಿಗ ಕೇಳಿಕೊಂಡೆ. ನಂತರ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಬಡಿಗೆಯಿಂದ ನನ್ನ ತಲೆಗೆ ಹೊಡೆಯಲು ಬಂದಾಗ ನಾನು ನನ್ನ ಎಡಗೈ ಅಡ್ಡ ತಂದಾಗ ನನ್ನ ಕೈಗೆ ಏಟು ಬಿದಿದ್ದರಿಂದ ಗಾಯಾವಾಗಿರುತ್ತದೆ. ಆರೋಪಿಯು ನನ್ನ ಕುಬುಸ ಹಿಡಿದು ಎಳೆದ , ಕೈಯಿಂದ ನನ್ನ ಕಿವಿಗೆ ಹೊಡೆದ , ಕೂದಲು ಹಿಡಿದು ಎಳೆದಾಡಿ, ನನಗೆ ಹೊಡೆದನು. ನನ್ನ ತಂದೆ ತಾಯಿಯರು ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿಯು ಹೊಡೆದಿರುತ್ತಾನೆ. ಚಾಸಾ: 8 ರವರು ಬಂದು ನನ್ನ ಕಾಪಾಡಿರುತ್ತಾನೆ. ಲಾರಿ ಮತ್ತು ಹಮಾಲರು ಸೇರಿ ನನ್ನ ಕೈ ಹಿಡಿದು ಎಳೆದು ಬೇರೆ ಕಡೆ ಹಾಕಿದರು. ಆ ಸಮಯದಲ್ಲಿ ಆರೋಪಿಯು ಉಳಿದ ಹಮಾಲ ಮತ್ತು ಚಾಲಕನಿಗೆ ನೀವು ತುಂಬಿ ನಾನು ಅವಳಿಗೆ ಕೊಲೆ ಮಾಡುವುದಾಗಿ ಜೀವದ ಬೆದರಿಕೆ ಹಾಕಿದರು. ಉಳಿದ 5 ಜನರು ಹಮಾಲರು ಮತ್ತು ಚಾಲಕ ಅವಾಚ್ಯ ಶಬ್ದದಿಂದ ಬೈದು ನಮ್ಮ ತಂದೆ ತಾಯಿಗೆ ಹೊಡೆಯಲು ಬಂದರು. ನಂತರ ಲಾರಿಯನ್ನು ತುಂಬಿಕೊಂಡು ಹೋಗಿರುತ್ತಾರೆ. ನನಗೆ ಮೈ ತುಂಬಾ ಗಾಯವಾಗಿ, ಕುಬುಸ ಹರಿದಿತ್ತು. ನಂತರ ಅದೇ ದಿವಸ ನಾನು ವಡಗೇರಾ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಪೋಲಿಸರಿಗೆ ಗಾಯವನ್ನು

ತೋರಿಸಿರುತ್ತೇನೆ. ಅವರು ನಮಗೆ ಬರುವುದಿಲ್ಲ ಮಹಿಳಾ ಠಾಣೆಗೆ ಹೋಗಿ ಎಂದು ನನಗೆ ತಿಳಿಸಿದರು. ಅದೇ ದಿನ ನಾವು ಮ.ಠಾಣೆಗೆ ಹೋಗಿ ಸಾಃ 4-00 ಗಂಟೆಗೆ ದೂರು ಕೊಡಲು ಹೋದಾಗ ನಾಳೆ ನಿನ್ನ ಗಂಡನನ್ನು ಕರೆಸುತ್ತೇನೆ ನಿನಗೆ ಎನು ಕೊಡಬೇಕಾಗುತ್ತದೆ ಕೊಡಿಸುತ್ತೇನೆ ಎಂದು ಹೇಳಿ ದೂರು ತೆಗೆದುಕೊಂಡಿರುವುದಿಲ್ಲ. ಮತ್ತೆ ಮಾರನೆ ದಿವಸ ದಿಃ10-06-2021 ರಂದು ಮ. ಪೋಲಿಸ ಠಾಣೆಗೆ ಹೋಗಿರುತ್ತೇನೆ. ನನ್ನ ಗಂಡನನ್ನು ಕರೆಸಿದರು ಆತ ಬರಲಿಲ್ಲ ಅದಕಾರಣ ನನ್ನ ಪ್ರಕರಣ ನೊಂದಣಿ ಮಾಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಾರನೆ ದಿವಸ ಪೋಲಿಸರು ಬೆಃ9-00 ಗಂಟೆಗೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಸಮಯಲ್ಲಿ ನನಗೆ ಹೊಡೆದ ಬಡಿಗೆಯನ್ನು ತೋರಿಸಿದ್ದು ಅದನ್ನು ಪೋಲಿಸರು ಪಂಚನಾಮೆ ಮೂಲಕ ವಶಪಡಿಸಿಕೂಂಡಿರುತ್ತಾರೆ. ನಂತರ ಪಂಚನಾಮೆ ಮಾಡುವ ಸಮಯದಲ್ಲಿ ಎರಡು ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ಪೋಲಿಸರು ದಿಃ21-06-2021 ರಂದು ನನಗೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-4 ಎಂದು, ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯು ಸೀಲ್ಡ ಕವರಿನಲ್ಲಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ತೆರೆಯಲಾಯಿತು. ಆರೋಪಿಯು ಈ ತನ್ನ 2 ನೇ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸವಾಗಿರುತ್ತಾರೆ. ಸಾಕ್ಷಿಯು ಮು.ಮಾಲನ್ನು ನೋಡಿ ಗುರುತಿಸಿದ್ದು , ಅದನ್ನು ಮು. ಮಾಲು-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.